# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಯೋಜನೆ ಘಟಕ

ಕವಿಪ್ರನಿನಿ/ಬಿ. B93/35989/2017-18 ಅ೪೨-10

ನಿಗಮ ಕಾರ್ಯಾಲಯ, ಕಾವೇರಿ ಭವನ
ಬೆಂಗಳೂರು, ದಿನಾಂಕ:13-11-2017

1. ವ್ಯವಸ್ಥಾಪಕ ನಿರ್ದೇಶಕರು,
   ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
2. ಎಲ್ಲಾ ಆರ್ಥಿಕ ಸಲಹೆಗಾರರು,
   ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು.

| NDCPS<br>ನಾಮನಿರ್ದೇಶಿತರ<br>ಬದಲಾವಣೆ |
|---|

ಮಾನ್ಯರೇ,

ವಿಷಯ: ಕವಿಪ್ರನಿನಿ/ವಿಸಕಂಗಳ ನೌಕರರು ಸೇವೆಗೆ ಸೇರುವಾಗ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಸಲ್ಲಿಸಬೇಕಾದ ಅನುಬಂಧ-1ರಲ್ಲಿ ನೀಡಿದ್ದ ನಾಮ ನಿರ್ದೇಶಿತರ ಬದಲಾವಣೆಯ ಬಗ್ಗೆ.

ಉಲ್ಲೇಖ: 1) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ4/ಪಿಇಟಿ 2005 ದಿನಾಂಕ:31.03.2006.
2) ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007.
3) ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/4977/2005-06 ದಿನಾಂಕ: 21.08.2007.
4) ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ93/35989/2016-17/ಸಿವೈಎಸ್-12 ದಿನಾಂಕ:14.12.2016.

*********

ಉಲ್ಲೇಖ 2 ರಲ್ಲಿರುವ ನಿಗಮದ ಆದೇಶದಲ್ಲಿ, ಕವಿಪ್ರನಿನಿ/ವಿಸಕಂಗಳಲ್ಲಿ ದಿನಾಂಕ 01.04.2006 ರಂದು ಮತ್ತು ನಂತರ ಸೇವೆಗೆ ಸೇರುವ ಅಧಿಕಾರಿ/ನೌಕರರಿಗೆ ಅನ್ವಯವಾಗುವಂತೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಉಲ್ಲೇಖ 3 ರಲ್ಲಿರುವ ನಿಗಮದ ಆದೇಶದಲ್ಲಿ, ಸದರಿ ಯೋಜನೆಯ ಅನುಷ್ಠಾನಕ್ಕೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ವಿವರವಾಗಿ ತಿಳಿಸಲಾಗಿರುತ್ತದೆ. ಸದರಿ ಆದೇಶದ ಕಂಡಿಕೆ 3,4,5 ಮತ್ತು 6 ರಲ್ಲಿ ಸದರಿ ಯೋಜನೆ ವ್ಯಾಪ್ತಿಯ ನೌಕರರು ಕೆಲಸಕ್ಕೆ ಸೇರಿದ ತಕ್ಷಣ ಸಲ್ಲಿಸಬೇಕಾದ ಅನುಬಂಧ-1ರ ಬಗ್ಗೆ ಉಲ್ಲೇಖಿಸಲಾಗಿರುತ್ತದೆ ಹಾಗೂ ಉಲ್ಲೇಖ-4ರಲ್ಲಿ ಅನುಬಂಧ-1ರ ಪರಿಷ್ಕೃತ ನಮೂನೆಯನ್ನು ನಿಗಧಿಪಡಿಸಲಾಗಿರುತ್ತದೆ (ದಿನಾಂಕ: 01.01.2017 ರಿಂದ ಜಾರಿಯಾಗಿರುತ್ತದೆ). ನಾಮನಿರ್ದೇಶನದ ಬದಲಾವಣೆ ಮಾಡಲು ಪರಿಷ್ಕೃತ ಅನುಬಂಧ-1 ಅನ್ನು ಮರು ಸಲ್ಲಿಸುತ್ತಿರುವುದು ಈ ಕಚೇರಿಯ ಗಮನಕ್ಕೆ ಬಂದಿರುತ್ತದೆ. ಅನುಬಂಧ-1ರಲ್ಲಿ ಈಗಾಗಲೇ ಸಲ್ಲಿಸಿರುವ ಮಾಹಿತಿಯಲ್ಲಿ ನಾಮನಿರ್ದೇಶನದ ಹೊರತಾಗಿ ಬೇರೆ ಯಾವುದೇ ಬದಲಾವಣೆ ಈಗ ಮಾಡಬೇಕಾಗಿಲ್ಲದೇ ಇರುವುದರಿಂದ ನಾಮನಿರ್ದೇಶನ ಬದಲಾವಣೆಗೆ ಮಾತ್ರ ಸೀಮಿತಗೊಳಿಸಿ ಒಂದು ಹೊಸ ನಮೂನೆಯನ್ನು ನಿಗದಿಪಡಿಸಲಾಗಿದೆ.

ಈ ಮೇಲಿನ ಹಿನ್ನೆಲೆಯಲ್ಲಿ, ನಾಮನಿರ್ದೇಶಿತರ ಬದಲಾವಣೆಗಾಗಿ ಮನವಿಯನ್ನು ಸಲ್ಲಿಸುವ ಸಂದರ್ಭದಲ್ಲಿ, ಈ ಸುತ್ತೋಲೆಗೆ ಲಗತ್ತಿಸಿರುವ ನಮೂನೆಯಲ್ಲಿಯೇ ಮಾಹಿತಿಯನ್ನು ಒದಗಿಸಲು, ಎಲ್ಲಾ ವೇತನ ಬಟವಾಡೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವಂತೆ ಕೋರಲಾಗಿದೆ.

ಇನ್ನುಮುಂದೆ ನಾಮನಿರ್ದೇಶನದ ಬದಲಾವಣೆಗಾಗಿ ವಿವರಗಳನ್ನು ಅನುಬಂಧ-1ರ ಬದಲಾಗಿ ಅನುಬಂಧ-1 Aನಲ್ಲಿ ಮಾತ್ರವೇ ಸಲ್ಲಿಸುವುದು.

ಮೇಲಿನ ಎಲ್ಲಾ ಸೂಚನೆಗಳನ್ನು ವೇತನ ಬಟವಾಡೆ ಮಾಡುವ ಅಧಿಕಾರಿಗಳು ತಪ್ಪದೇ ಪಾಲಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು (ಆ ಮತ್ತು ಮಾ.ಸಂ),
ಕವಿಪ್ರನಿನಿ

ಪ್ರತಿಗಳು:

1) ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

2) ವ್ಯವಸ್ಥಾಪಕ ನಿರ್ದೇಶಕರು, ಪಿಸಿಕೆಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ, ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

3) ನಿರ್ದೇಶಕರು(ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ, ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.**

1. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
2. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
3. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
4. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
5. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು

ANNEXURE-IA

# KPTCL & ESCOMs NEW DEFINED CONTRIBUTORY PENSION SCHEME

## CHANGE OF NOMINATION

NAME OF THE COMPANY:

NAME OF THE ACCOUNTING UNIT & LOCATION CODE:

DATE OF CHANGE OF NOMINATION:

| PPA Number | Name of the Officer/ Employee | Date of Birth | Date of Entry in to Service | Name of the Nominee | Date of Birth of the Nominee | Age of the Nominee | Relationship of Nominee with Employee | % age share of benefits payable |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |

*(NOTE: This nomination supersedes the earlier nominations)*

Pay Drawing Officer
(With Office Seal)

Signature of the Employee